ಸಣ್ಣಗಾಗಿತ್ತು. ಅದೇನು ಅದೃಷ್ಟವೋ, ತುಂಬಾ ಹಂಬಲಿಸಿದ್ದನ್ನು ವಿಧಿ ನೆರವೇರಿಸಿಬಿಡುವುದೋ, ಸಾಮಾನು ತಂದುಕೊಟ್ಟ ಆತ ಅವನನ್ನು ಮನೆಯೊಳಗೆ ಆಹ್ವಾನಿಸಿದ್ದರು, 'ಕಾಫಿ ಕುಡೀತೀರಾದ್ರೆ ಬನ್ನಿ' ಎನ್ನುತ್ತಾ. ಔಪಚಾರಿಕವಾದ ಒಂದು ಆಹ್ವಾನಕ್ಕೆ 'ಬೇಡ, ಪರ್ವಾಗಿಲ್ಲ...' ಎಂದು ಉತ್ತರ ಕೊಡುವುದು ಲೋಕಾರೂಢಿ. ಕೇಶವ ಆ ಲೋಕಾರೂಢಿ ಮರೆತು ಅವರ ಕರೆಗಾಗಿಯೇ ಕಾದಿದ್ದವನಂತೆ ಚಪ್ಪಲಿ ಕಳಚಿ ಮನೆಯೊಳಗೆ ಹೆಜ್ಜೆ ಇಟ್ಟಿದ್ದ.

ವರಾಂಡ, ನಡುಮನೆ ಎಲ್ಲವೂ ಆಗಿದ್ದ ಜಾಗದಲ್ಲಿ ಸುಖಾಸೀನರಾಗಲು ಎರಡು ಗಾಡ್ರೆಜ್ ಕುರ್ಚಿಗಳು. ಕೂತಲ್ಲಿಂದ ಕಾಣುತ್ತಿದ್ದ ಅಡುಗೆಮನೆಯ ಒಳ ನೋಟ. ಇವತ್ತು ಅವಳ ಭಾನುವಾರದ ಅಭ್ಯಂಜನ ಬೇಗ ಮುಗಿದಿತ್ತೇನೋ, ಹಸಿಗೂದಲು ಬೆನ್ನ ಮೇಲೆ ಹರವಿಕೊಂಡಿತ್ತು. ಈಚೆ ಕೂತವರಿಗೆ ಬೆನ್ನು ತಿರುಗಿಸಿ ಅವಳು ಅಡುಗೆಮನೆಯ ಕಟ್ಟೆಯ ಮೇಲಿದ್ದ ಗ್ಯಾಸ್ ಸ್ಟೌವ್‌ನಲ್ಲಿ ಕಾಫಿ ತಯಾರಿಸುತ್ತಿದ್ದಳು. ಪಿಸುಗುಟ್ಟಿದರೂ ಕೇಳಿಸುವಷ್ಟು ಸಣ್ಣ ಮನೆಯಲ್ಲಿ ಅಪ್ಪ ಅತಿಥಿಯನ್ನು ಆಹ್ವಾನಿಸಿದ್ದನ್ನು ಅವಳಿಗೆ ಪ್ರತ್ಯೇಕವಾಗಿ ತಿಳಿಸಬೇಕಾದ್ದಿರಲಿಲ್ಲ. ಕೇಶವ ಅವಳ ಮುಖದರ್ಶನಕ್ಕಾಗಿ ಉತ್ಕಂಠತೆಯಿಂದ ಕಾದು ಕೂತಿದ್ದ. ಯಜಮಾನರು ಕೇಳುತ್ತಿದ್ದ ಪ್ರಶ್ನೆಗಳು ಕಿವಿಯ ಮೇಲೆ ಬೀಳುತ್ತಿದ್ದರೂ, ಬಾಯಿ ಅದಕ್ಕೆ ಸೂಕ್ತ ಉತ್ತರ ಕೊಡುತ್ತಿದ್ದರೂ, ಚಿತ್ತ ಮತ್ತೆಲ್ಲೋ. ಮೊದಲೇ ತಾಳ ತಪ್ಪಿದ್ದ ಕೇಶವನ ಎದೆಬಡಿತ ಮತ್ತಷ್ಟು ಏರುಪೇರಾಗುವಂತೆ ಕಾಫಿ ತಂದು ಎದುರಿನ ಟೀಪಾಯಿಯ ಮೇಲಿಟ್ಟ ಅವಳು ಕೇಶವನ ಮುಖ ನೋಡಿ ಪರಿಚಯದ ನಗೆ ನಕ್ಕಿದ್ದಳು. ಅಲ್ಲಿಗೆ ಪೂರ್ತಿ ಹೊಂಡಕ್ಕೆ ಬಿದ್ದುಬಿಟ್ಟಿದ್ದ ಕೇಶವ. ಮೊಗ್ಗು ಹೂವಾಗಿ ಅರಳಿದಂತೆ ಅವಳು ನಕ್ಕಾಗಿನ ಆ ಸೊಬಗೇ ಬೇರೆ. ಕೇಶವನ ಮಟ್ಟಿಗೆ ಅಪೂರ್ವ. ಆತ ಪರಿಚಯಿಸಿದ್ದರು,

ನನ್ನ ಮಗಳು ಕಾವೇರಿ. ಬಿ.ಕಾಂ. ಸೆಕೆಂಡ್ ಇಯರ್‌ನಲ್ಲಿದಾಳೆ

***

ನಿಧನಿಧಾನಕ್ಕೆ ಗಾಢವಾಗಿತ್ತು ಪರಿಚಯ. ಪ್ರತಿ ಭಾನುವಾರ ಅನ್ನುವಂತೆ ಕೇಶವ ಅಗತ್ಯ ವಸ್ತುಗಳ ಪಟ್ಟಿ ಹಿಡಿದುಕೊಂಡು ಆ ಮನೆಗೆ ಸರಾಗವಾಗಿ ಹೋಗಿ ಬರಲು, ಹೋದಾಗಲೆಲ್ಲಾ ಒಂದು ಲೋಟ ಕಾಫಿಗೆ ಭಾಜನನಾಗಲು ಹೆಚ್ಚು ಕಾಲ ಬೇಕಾಗಲಿಲ್ಲ. ಮೊದಮೊದಲಿನ ಹಿಂಜರಿಕೆ, ಅಳುಕು ತಲೆ ಮರೆಸಿಕೊಂಡಿತ್ತು. ಕಾವೇರಿಯೊಡನೆ ಸಲೀಸಾಗಿ ಮಾತಾಡುವಷ್ಟು ಸಲಿಗೆ ಬೆಳೆಯತೊಡಗಿತ್ತು. 'ತಮ್ಮ ಜನಾನೇ...' ಎನ್ನುವ ವಿಶ್ವಾಸ ಗೋಪಾಲಯ್ಯನಿಗೆ. 'ಅದಕ್ಕೇ ಬುಟ್ಟಿಗೆ ಹಾಕಿಕೊಂಡಿದ್ದು' ಎನ್ನುವ ಗುಮಾನಿ ಕೇಶವನ ಅಪ್ಪ, ಅಮ್ಮನದು. ಅದೆಲ್ಲಾ ಹಿಂದೊಂದು ಕಾಲದ ಕತೆ.

***

ಯಾರು ಯಾರನ್ನು ಬುಟ್ಟಿಗೆ ಹಾಕಿಕೊಂಡಿದ್ದು? ಬಲೆಗೆ ಕೆಡವಿದ್ದು? ಕೇಶವನ ಬರಹೋಗುವಿಕೆಯಲ್ಲಿನ ಒಳಗುಟ್ಟು ಅರ್ಥ ಮಾಡಿಕೊಂಡಿದ್ದಳು ಕಾವೇರಿ. ವಯೋಸಹಜವಾಗಿ ಅವಳ ಮನಸ್ಸೂ ಅವನಿಗೆ ಒಲಿದಿತ್ತು. ಹಾಗಿದ್ದರೂ ಅವಳು ಕೇಶವನ ನಿವೇದನೆಗೆ ಕಣ್ಣು ಮುಚ್ಚಿಕೊಂಡು ಒಪ್ಪಿಗೆ ಕೊಟ್ಟಿರಲಿಲ್ಲ. ಅವಳ ಡಿಗ್ರಿ ಮುಗಿದು ಫಲಿತಾಂಶವೂ ಬಂದ ಮೇಲೆ ಒಮ್ಮೆ ಅವಳ ಅಪ್ಪ ಅಂಗಡಿಯಲ್ಲಿರುವ ಹೊತ್ತು ಸಾಧಿಸಿ ಕೇಶವ ಅವಳನ್ನು ಸಂಧಿಸಿದ್ದ,

'ಇನ್ನೇನು? ಮದುವೆ ಮಾಡ್ಕೊಳ್ಳೋದು ತಾನೇ? ಡಿಗ್ರಿ ಮುಗೀತಲ್ಲ...' ಕೆಣಕಿದ್ದ.

'ಅದೆಲ್ಲಾ ಸದ್ಯಕ್ಕಿಲ್ಲ. ಮೊದಲು ನಾನು ಕೆಲಸಕ್ಕೆ ಸೇರ್ಬೇಕು. ಅಪ್ಪನ್ನ ಚೆನ್ನಾಗಿ ನೋಡ್ಕೋಬೇಕು. ಅಪ್ಪ, ಅಮ್ಮ ಎರಡೂ ಆಗಿ ನನ್ನನ್ನ ಸಾಕಿ ದೊಡ್ಡ ಮಾಡಿದಾರೆ. ಮಗಳಾಗಿ ನನಗೂ ಕರ್ತವ್ಯ ಇರುತ್ತಲ್ವಾ?'

ಅವಾಕ್ಕಾಗಿದ್ದ ಕೇಶವ. ತನ್ನಂತವನು ಕಣ್ಸನ್ನೆ ಮಾಡುತ್ತಿದ್ದಂತೆ ಹುಡುಗಿ ಹಾರಿ ಬಂದು ತನ್ನ ತೆಕ್ಕೆಗೆ ಸೇರಿಕೊಳ್ಳುತ್ತಾಳೆಂದು ಅವನು ಎಣಿಸಿರದಿದ್ದರೂ ಕಾವೇರಿ ಮದುವೆಯ ಬಗ್ಗೆ ಇಷ್ಟು ಉದಾಸಳಾಗಿದ್ದಾಳೆಂದು ಅವನು ಕಲ್ಪಿಸಿಕೊಂಡಿರಲಿಲ್ಲ.

'ಆಯ್ತು, ಕೆಲಸಕ್ಕೆ ಸೇರ್ತೀರಿ. ಅಪ್ಪನ್ನ ನೋಡ್ಕೋತೀರಿ. ಮುಂದೆ? ಮುಂದೆ ಮದುವೇನೇ ಆಗಲ್ವಾ?'

'ಸದ್ಯಕ್ಕಂತೂ ಆ ಯೋಚನೆ ಇಲ್ಲ ಅಂದ್ನಲ್ಲ.'

ಕೇಶವ ಅವಳನ್ನು ಅನುನಯಿಸಿದ್ದ. 'ಕಳೆದುಹೋದ ಯೌವನ' ಮರಳಿ ಬರುವುದಿಲ್ಲವೆಂದು ಮನವರಿಕೆ ಮಾಡಿಸಲು ಪ್ರಯತ್ನಿಸಿದ್ದ. 'ನೀವು ಒಪ್ಪದಿದ್ರೆ ನನಗೂ ಮದುವೆ ಇಲ್ಲ' ಎನ್ನುವ ಮಾತಾಡಿ ಅವಳ ಮನಸ್ಸಿನ ಮೃದುಭಾವನೆಯನ್ನು ಮೀಟಿದ್ದ. ಅವನು ಅವಸರ ಮಾಡಲೇಬೇಕಿತ್ತು. ಊರಿನಲ್ಲಿ ಈಗಾಗಲೇ ಅವನಿಗೆ ಹುಡುಗಿಯ ತಲಾಷು ಆರಂಭವಾಗಿತ್ತು. ಕಾವೇರಿಯನ್ನು ಬಿಟ್ಟು ಬೇರೆಯವರನ್ನು ಒಪ್ಪಲು ಅವನು ಸುತರಾಂ ಸಿದ್ಧನಿರಲಿಲ್ಲ. ಕೇಶವ ಬಾಣಪ್ರಯೋಗದ ದಿಕ್ಕು ಬದಲಿಸಿದ. ತನಗೆ ಹುಡುಗಿ ನೋಡುತ್ತಿರುವ ವಿಷಯವನ್ನು ಗೋಪಾಲಯ್ಯನ ಕಿವಿಗೆ ಹಾಕಿದ್ದೇ ತಡ ಅವರು ಬಾಯ್ಬಿಟ್ಟು ಕೇಳಿಬಿಟ್ಟರು,

'ನಾನು ಈ ಮಾತು ಕೇಳೋದು ತಪ್ಪಾ, ಸರಿಯಾ ಗೊತ್ತಿಲ್ಲ. ಆದ್ರೂ...'

'ಹೇಳಿ ಯಾಕೆ ಸಂಕೋಚ?'

'ನಿಮಗೆ ಅಡ್ಡಿಲ್ಲ ಅಂತಾದ್ರೆ ನಮ್ಮ ಕಾವೇರೀನ ಧಾರೆ ಎರೆದು ಕೊಡೋಕೆ ನಾನು ಸಿದ್ಧ. ಅಟ್ಟಕ್ಕೆ ಹಾರೋಕಾಗ್ದಿದ್ದೋರು ಬೆಟ್ಟಕ್ಕೆ ಹಾರೋಕೆ ಹೋಗ್ಬಾರ್ದು. ಆದ್ರೂ...'

'ಅಪ್ಪಾ...' ಎನ್ನುತ್ತಾ ಕಣ್ಣು ದೊಡ್ಡ ಮಾಡಿದ್ದಳು ಅಲ್ಲೇ ಇದ್ದ ಕಾವೇರಿ, ಅಸಮಾಧಾನದಿಂದ.

'ನೀನು ಸುಮ್ನಿರು...' ಎಂದಿದ್ದರು ಗೋಪಾಲಯ್ಯ.

ಮುಂದೆ ಕೇಶವ ತನ್ನ ಮನೆಯವರನ್ನು ಒಪ್ಪಿಸಲು ಹೆಣಗಾಡಿದ್ದು, ಒಪ್ಪದಿದ್ದರೆ ಮಗನನ್ನು ಶಾಶ್ವತವಾಗಿ ದೂರ ಮಾಡಿಕೊಳ್ಳುತ್ತೇವೆನ್ನುವ ಆತಂಕದಲ್ಲಿ ಕೊನೆಗೂ ಸಮ್ಮತಿಯ ಮುದ್ರೆ ಬಿದ್ದಿದ್ದು, ಕಾವೇರಿಯ ಕೈ ಹಿಡಿದು ತಾನು ಕೃತಾರ್ಥನಾದೆ ಎಂಬಂತೆ ಕೇಶವ ಬೀಗಿದ್ದು, ಇವತ್ತು ಹಳೆಯ ಸಂಗತಿ.

***

ಮದುವೆಯ ನಂತರ ಕೇಶವ ತನಗೆ ಅನುಕೂಲವಾದ ಸ್ಥಳದಲ್ಲಿ ಫ್ಲ್ಯಾಟ್ ಖರೀದಿಸಿದ. ಅವನು ಮೊದಲಿದ್ದ ಜಾಗದಿಂದ ಆ ಸ್ಥಳ ತುಂಬಾ ದೂರವೇನಲ್ಲದಿದ್ದರೂ ಅಪ್ಪನ ಯೋಗಕ್ಷೇಮದ ನಿಗಾ ವಹಿಸಲು ಕಾವೇರಿ ದಿನವೂ ಓಡಾಡುವಷ್ಟು ಹತ್ತಿರದಲ್ಲೂ ಇರಲಿಲ್ಲ. 'ಒಬ್ಬರಿಗೋಸ್ಕರ ಅವರ್‍ಯಾಕೆ ದುಡೀಬೇಕು? ಬಂದಿರ್‍ಲಿ ಇಲ್ಲೇ. ನಮಗೂ ಅನುಕೂಲವಾಗುತ್ತೆ' ಕೇಶವ ಹೊಸ ಹೆಂಡತಿಯ ಎದುರು ಔದಾರ್ಯ ಪ್ರದರ್ಶಿಸಿದ್ದ.

'ಬೇಡ ಕಣ್ರೀ. ನಿಮ್ಮನೆಯೋರು ತಪ್ಪು ತಿಳ್ಕೋತಾರೆ.'

'ಅವರೇನು ಇಲ್ಲಿಗೆ ಬಂದು ಇರೋರಲ್ಲ. ಅಪರೂಪಕ್ಕೆ ನಾಲ್ಕು ದಿನ ಬಂದ್ರೆ ಅದೇ ಹೆಚ್ಚೆಚ್ಚು. ಅದಕ್ಕೇ ಕಣೇ ಮೂರು ಬೆಡ್ ರೂಮಿನ ಫ್ಲ್ಯಾಟು ತಗೊಂಡಿರೋದು.'

'ಆದ್ರೂ...'

'ಯಾವತ್ತಾದ್ರೂ ಅವರು ನಮ್ಮ ಜೊತೇನೇ ಬಂದಿರ್ಬೇಕಲ್ವಾ? ಅವರಿಗಾದ್ರೂ ಇನ್ಯಾರಿದಾರೆ?'

ತನ್ನ ಇಷ್ಟಾರ್ಥ ನೆರವೇರಿದ ಸಂಭ್ರಮದಲ್ಲಿ ಯಾವ ವರ ಕೊಡಲೂ ಸಿದ್ಧನಾಗಿರುವಂತೆ ವರ್ತಿಸುತ್ತಿದ್ದ ಕೇಶವ. ಅವನ ಹೇಳಿಕೆ ಕಾವೇರಿಗೂ ಇಷ್ಟ. ಆದರೆ ಏನೋ ಹಿಂಜರಿಕೆ. ಮುಂದೆ ಕಾವೇರಿ ಗರ್ಭಿಣಿಯಾದಾಗ ಗೋಪಾಲಯ್ಯ ಮಗಳ ಮನೆ ಸೇರಿಕೊಳ್ಳಲೇಬೇಕಾಯ್ತು. ಕಂಪನಿ ಕೆಲಸದ ನಿಮಿತ್ತ ಯಾವಾಗೆಂದರೆ ಆವಾಗ ಮೂರು, ಆರು ತಿಂಗಳ ಮಟ್ಟಿಗೆ ವಿದೇಶಕ್ಕೆ ಹೋಗಿಬರಬೇಕಾದ ಅಳಿಯ. ಊರಲ್ಲಿದ್ದರೂ ಬೆಳಿಗ್ಗೆ ಕೆಲಸಕ್ಕೆ ಹೋದರೆ ಬರುವುದು ರಾತ್ರಿ. 'ಬಂದ್ಬಿಡಿ ಮಾವಾ...' ಅಂದ ಕೇಶವ, ಹೃತ್ಪೂರ್ವಕವಾಗಿ. ಓಗೊಟ್ಟರು ಗೋಪಾಲಯ್ಯ. ಬಾಡಿಗೆ ಕಟ್ಟಡ ಖಾಲಿ ಮಾಡಿಕೊಂಡು ಬರಲು ಕಷ್ಟವೇನಿರಲಿಲ್ಲ. ಗೋಪಾಲಯ್ಯ ಮಗಳ ಮನೆ ಸೇರಿಕೊಂಡದ್ದು ಅತ್ತ ಹಳ್ಳಿಯಲ್ಲಿದ್ದ ಅವನ ಹೆತ್ತವರಿಗೆ ಕೈಂಯಾಯ್ತು. ಸಾಕಿದ್ದು, ಬೆಳೆಸಿದ್ದು, ಓದಿಸಿದ್ದು ಯಾರೋ. ಪ್ರತಿಫಲ ಉಣ್ಣುತ್ತಿರುವವರು ಮತ್ಯಾರೋ. 'ಇದು ಹಿಂಗಾಗುತ್ತೇಂತ ಮೊದ್ಲೇ ಗೊತ್ತಿತ್ತು. ಶುಕ್ರದೆಸೆ ಒದ್ಗಂಬರೋದು ಅಂದ್ರೆ ಹಿಂಗೇ...' ಅಂದಿದ್ದರಂತೆ ಅಪ್ಪ. ಯಾರೋ ಇವನವರೆಗೆ ಎಲ್ಲಾ ತಂದು

